ಮೈಸೂರು ನಗರ ಹಾಗೂ ಸುತ್ತಮುತ್ತ ಕೈಗಾರಿಕರಣ ಹಿನ್ನಡೆಯಾಗಿರುವ ಬಗ್ಗೆ

167(360) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು, ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರ ಮತ್ತು ಅದರ ಸುತ್ತಮುತ್ತ ಇರುವ ಕೈಗಾರಿಕಾ ಪ್ರದೇಶಗಳೆಷ್ಟು ? (ವಿವರ ಒದಗಿಸುವುದು) :

ಆ) ಈ ಕೈಗಾರಿಕಾ ಪ್ರದೇಶಗಳಲ್ಲಿ (ರಸ್ತೆ,ವಿದ್ಯುತ್,ನೀರು,ಸಾರಿಗೆ) ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಎಷ್ಟು ವೆಚ್ಚದಲ್ಲಿ ಸದರಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ;

ಇ) ಮೇಲಿನ ಸೌಲಭ್ಯಗಳಿಗಾಗಿ ಇನ್ನೂ ಎಷ್ಟು ವೆಚ್ಚ ಮಾಡಬೇಕಾಗಿರುವುದು ;

ಈ) ಮೂಲಭೂತ ಸೌಲಭ್ಯಗಳ ಕೊರತೆಯಿಂದಾಗಿ ಕೈಗಾರೀಕಿರಣಕ್ಕೆ ಹಿನ್ನೆಡೆಯಾಗಿರುವುದರಿಂದ ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು, ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮೈಸೂರು ನಗರ ಮತ್ತು ಅದರ ಸುತ್ತಮುತ್ತ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ನಾಲ್ಕು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿದೆ. ಅವುಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕೈಗಾರಿಕಾ ಪ್ರದೇಶ	ವಿಸ್ತೀರ್ಣ (ಎಕರೆಗಳಲ್ಲಿ)
1.	ಹೆಬ್ಬಾಳ್	1603.00
2.	ಬೆಳಗೊಳ(ಮೇಟಗಳ್ಳಿ)	519.00
3.	ಹೂಟಗಳ್ಳಿ	426.00
4.	ಬೆಳವಾಡಿ	238.00
	ಒಟ್ಟು	**2786.00**

ಆ) ಮೇಲಿನ ನಾಲ್ಕು ಪ್ರದೇಶಗಳನ್ನು ಮಂಡಳಿಯು ಅಭಿವೃದ್ಧಿ ಪಡಿಸಿದ್ದು ರಸ್ತೆ, ನೀರು ಸರಬರಾಜು, ದಾರಿದೀಪ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ್ದು, ಈ ಸೌಲಭ್ಯ ಒದಗಿಸಲು ಈವರೆಗೆ ರೂ. 22,23,73,262 ಗಳನ್ನು ವೆಚ್ಚ ಮಾಡಲಾಗಿದೆ. (31–3–2004ರ ತನಕ)

ಇ) ಮೇಲಿನ ಕೈಗಾರಿಕಾ ಪ್ರದೇಶಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಮಂಡಳಿಗೆ ಅಂದಾಜು ರೂ. 10.00 ಕೋಟಿ ಅವಶ್ಯಕತೆಯಿದೆ.

ಈ) ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಒದಗಿಸಲಾಗಿದೆ. ಆದರೆ ಇನ್ನೂ ಹೆಚ್ಚಿನ ನಾಗರೀಕ ಸೌಲಭ್ಯಗಳನ್ನು ಒದಗಿಸಲು (ಕ್ರಮ ಸಂಖ್ಯೆ (ಇ) ನಲ್ಲಿ ತಿಳಿಸಿರುವಂತೆ) ಹೆಚ್ಚಿನ ಅನುದಾನ ಅವಶ್ಯವಿರುವುದು.